# ಸುರೇಶ್ ನಾಗಲಮಡಿಕೆ ಅವರ ಕೃತಿಗಳಲ್ಲಿ ಅವೈದಿಕ ಪರಂಪರೆಗಳು

ಸಂಗನಗೌಡ ಹಿರೇಗೌಡ

ಸಂಶೋಧನಾ ವಿದ್ಯಾರ್ಥಿ,

ಕರ್ನಾಟಕಕೇಂದ್ರೀಯ

ವಿಶ್ವವಿದ್ಯಾಲಯ,ಕಲಬುರಗಿ

585367

ಇಮೇಲ್: sanganagouda666@gmail.com

**[ಬಯಲಾಗುವ ಪರಿ, ಕನಕ ಸಾಹಿತ್ಯ ಅಧ್ಯಯನ, ಹಾಡು ಕಲಿಸಿದ ಹರ. ಕೃತಿಗಳನ್ನು ಅನುಲಕ್ಷಿಸಿ]**

ಕನ್ನಡ ಸಾಹಿತ್ಯದ ಸಾಂಸ್ಕೃತಿಕ ಚರಿತ್ರೆಯಲ್ಲಿ ಈಗಾಗಲೆ 'ಜ್ಞಾತ'ವೆಂದು ಕರೆಯಲಾಗಿರುವ ಪರಂಪರೆಗಳನ್ನು ನಿರ್ವಚಿಸಿ ನೋಡಿದ ಅಥವ ಅನ್ಯತನದ ಭರಾಟೆಯ ನಡುವೆಯೂ ನಿಂತ ನೆಲದ ಮೂಲಕ ತನ್ನತನವನ್ನು ಕಾಪಿಟ್ಟುಕೊಂಡಿರುವ ಅಜ್ಞಾತ ಜ್ಞಾನಪರಂಪರೆಗಳ ಕುರಿತು ಡಿ.ಆರ್ ನಾಗರಾಜ್, ಕಿ.ರಂ.ನಾಗರಾಜ, ಲಿಂಗರಾಜು, ಎಮ್.ಎಮ್ ಕಲಬುರ್ಗಿ, ಶಂ.ಬಾ ಜೋಶಿ, ಕಪಟರಾಳ, ಎಸ್.ಎಸ್ ಹಿರೇಮಠ, ನಟರಾಜ ಬೂದಾಳು, ಜಿ.ರಾಮಕೃಷ್ಣ. ಗೋವಿಂದ್ ರಾನಡೆ, ಎಚ್.ಎಸ್ ಶಿವಪ್ರಕಾಶ್, ರಹಮತ ತರೀಕೆರೆ, ಪುರುಷೋತ್ತಮ್ ಬಿಳಿಮಲೆ, ಜಿ.ವಿ ಆನಂದಮೂರ್ತಿ, ಕೇಶವ ಮಳಗಿ, ಲಕ್ಷ್ಮೀಪತಿ ಕೋಲಾರ, ವೀರಣ್ಣ ದಂಡೆಯವರನ್ನೂ ಒಳಗೊಂಡು ಅನೇಕ ವಿದ್ವಾಂಸರು ಈ ಪರಂಪರೆಗಳ ಕುರಿತು ಕೆಲವರು ಇಡಿಯಾಗಿ ಇನ್ನೂ ಕೆಲವರು ಬಿಡಿಯಾಗಿ ಸಂಪಾದಿಸುವ ಮತ್ತು ಸಂಶೋಧಿಸುವ ಹಾಗೂ ವಿಮರ್ಶಿಸುವ ಬರೆಹಗಳನ್ನು ಮಾಡಿದ್ದಾರೆ. ಸುರೇಶ್ ನಾಗಲಮಡಿಕೆ ಅವರು ತಮ್ಮ ಅಧ್ಯಯನಕ್ಕೆ ಪೂರಕವಾಗಿ ಮೇಲೆ ಪ್ರಸ್ತಾಪಿಸಿರುವ ಬಹುತೇಕ ವಿದ್ವಾಂಸರನ್ನೂ ಒಳಗೊಂಡು ಕನ್ನಡೇತರ ವಿದ್ವಾಂಸರ ವಿಚಾರಗಳನ್ನೂ ತಮ್ಮ ಈ ಮೂರೂ ಕೃತಿಗಳಾದ 'ಬಯಲಾಗುವ ಪರಿ', 'ಕನಕ ಸಾಹಿತ್ಯ ಅಧ್ಯಯನ' ಮತ್ತು 'ಹಾಡು ಕಲಿಸಿದ ಹರ' ಕೃತಿಗಳಿಗೆ ಬಳಸಿಕೊಂಡು ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಹಾಗೂ ದರ್ಶನದ ಹಿನ್ನಲೆಯಲ್ಲಿ

ಹಿಗ್ಗಿಸುವ ಪ್ರಯತ್ನ ಮಾಡಿದ್ದಾರೆ. ಹೀಗೆ ಹಿಗ್ಗಿಸುವಾಗ ಅವರು ಚರಿತ್ರೆಗಿಂತ ಹೆಚ್ಚು ಮೌಖಿಕ ಪರಂಪರೆಗಳನ್ನೇ ಹೆಚ್ಚು ಬಳಸಿಕೊಳ್ಳುತ್ತಾರೆ.

ಈ ಮೂರೂ ಪುಸ್ತಕಗಳು ತಾತ್ವಿಕವಾಗಿ ಒಂದಕ್ಕೊಂದು ಲಿಂಕ್ ಇರುವುದರಿಂದ ಸುರೇಶ್ ನಾಗಲಮಡಿಕೆಯವರ ಅಧ್ಯಯನ ಕ್ರಮಗಳು 'ವಿದ್ರೋಹತನ' ದಿಂದ ಕೂಡಿದ್ದಾವೆಂದು ಹೇಳಬೇಕಾಗುತ್ತದೆ. ಅವರಿಗೆ ಈ ರೀತಿ ಆಲೋಚಿಸಿಲು ಸ್ವತಃ ಈ ಅಜ್ಞಾತ ಜ್ಞಾನಪರಂಪರೆಗಳೇ ಇಂಬು ಮಾಡಿಕೊಟ್ಟಿರುವುದರ ಬಗ್ಗೆ ಅವರು ಬಳಸಿಕೊಂಡಿರುವ ಮೂಲಪಠ್ಯಗಳು ಮತ್ತು ಪರಾಮರ್ಶನ ಗ್ರಂಥಗಳಿಂದಲೇ ತಿಳಿದು ಬರುತ್ತದೆ.

ಈ ಮೂರು ಕೃತಿಗಳಲ್ಲಿ ಅವರ ಜರ್ನಿಯನ್ನು ಸೂಕ್ಮವಾಗಿ ಗಮನಿಸಿದ್ರೆ, 'ಬಯಲಾಗುವ ಪರಿ' ಕೃತಿಯಲ್ಲಿದ್ದ ಗ್ಯಾಪುಗಳು 'ಕನಕ ಸಾಹಿತ್ಯ ಅಧ್ಯಯನ'ದಲ್ಲಿ ಸಿಗುತ್ತವೆ ಮತ್ತು ಕನಕ ಸಾಹಿತ್ಯ ಅಧ್ಯಯನ'ದಲ್ಲಿದ್ದ ಗ್ಯಾಪುಗಳು 'ಹಾಡು ಕಲಿಸಿದ ಹರ' ಕೃತಿಯಲ್ಲಿ ಸುದೀರ್ಘವಾಗಿ ಸಿಗುತ್ತವೆ. ನಮ್ಮ ಓದು ಹೆಚ್ಚಾದಂತೆ ನಮ್ಮ ಆಲೋಚನಾ ಕ್ರಮಗಳು ಸೂಕ್ಷ್ಮವಾಗುತ್ತ ಹೋಗುತ್ತವೆ ಎನ್ನುವುದಕ್ಕೆ ಈ ಅವೈದಿಕ ಪರಂಪರೆಗಳಲ್ಲಿದ್ದ ವಿದ್ರೋಹತನದ ವಿಷಯಗಳು ಹಂತ ಹಂತವಾಗಿ ಡಿವೆಲಪ್ ಆಗುತ್ತ ಸಾಗುತ್ತವೆ. 'ಬಯಲಾಗುವ ಪರಿ'ಯಲ್ಲಿ ಅವೈದಿಕ ದರ್ಶನದಲ್ಲಿ ಮಹಿಳೆ, ಮಹಿಳಾ ನೋಟಕ್ರಮದಲ್ಲಿ ತಂತ್ರ ಮತ್ತು ಶಾಕ್ತ, ಕುಂಡಲಿನಿ, ಪಂಚಮಕಾರಗಳು, ಕುಲ ಅಕುಲಗಳ ಕುರಿತು ಪ್ರಾರಂಭವಾಗುವ ಚರ್ಚೆ ಮುಂದೆ 'ಅಜೀವಿಕರೆಂಬ ಮುಳ್ಳಿನ ತೋಟಗಾರರು' ಎಂಬ ಲೇಖನದಲ್ಲಿ ಅವರೇ ಹೇಳುವಂತೆ 'ಕ್ರಿ.ಪೂ ೬ ಮತ್ತು ೭ನೇ ಶತಮಾನಗಳ ದಾರ್ಶನಿಕ ಪಂಥಗಳ ಸಂಘರ್ಷವನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಜೈನ, ಬೌದ್ಧರನ್ನು ಮಾತ್ರ ಅವೈದಿಕ ಪಂಥಗಳೆಂದು ಕರೆದಿದ್ದಾರೆ. ಆದರೆ ಅದೇ ಕಾಲಘಟ್ಟದಲ್ಲಿ ಈ ಪಂಥಗಳ ಜತೆಯಲ್ಲಿ ಇದ್ದ ಆರು ಜನ ದಾರ್ಶನಿಕರು [ಇವರನ್ನು ಪಾಷಂಡಿಗಳು ಎಂದು ಕರೆಯಲಾಗಿದೆ] ಇದ್ದರು ಪೂರಣ ಕಸ್ಸಪ, ಪಕುಧ ಕಚ್ಚಾಯನ, ಮಕ್ಕಲಿ ಗೋಸಾಲ, ಅಜೀತ ಕೇಶಕಂಬಲಿ, ಸಂಜಯ ಬೆಲಟ್ಟಿಪುತ್ತ, ಮತ್ತು ನಿಗಂಠ ನಾತಪುತ್ತ. ಬುದ್ಧ ಇವರನ್ನು ಆಚಾರ್ಯರೆಂದು ಕರೆದಿದ್ದಾನೆ. ಆದರೆ ಇವರ ತತ್ವಗಳು ಬುದ್ಧ ಮಹಾವೀರರಂತೆ ಯಾಕೆ ದಾಖಲಾಗಲಿಲ್ಲ? ಇವರನ್ನು ಯಾಕೆ ಯಾವುದೇ ನಿರ್ದಿಷ್ಟ ಪಂಥಗಳ ಜತೆ ಗುರುತಿಸಲು ಆಗಲಿಲ್ಲ? ಚಾರ್ವಾಕರಿಗಿಂತ ಇವರು ಹೇಗೆ ಭಿನ್ನ? ಅವೈದಿಕ ಪಂಥಗಳು ಎನಿಸಿಕೊಂಡಿರುವ ಜೈನ ಮತ್ತು ಬೌದ್ಧ ಧರ್ಮಗಳಿಗೆ ಈ ಪಾಷಂಡಿಗಳು ಯಾಕೆ ಒಂದು ಬಗೆಯಲ್ಲಿ ಖಳನಾಯಕರಾಗಿ ಕಂಡರು? ಸಾಮಾಜಿಕ ನ್ಯಾಯವನ್ನು ಒಪ್ಪುವ ಮಹಾವೀರ, ಬುದ್ಧರು ಮಕ್ಕಲಿ ಗೋಸಾಲನನ್ನು ತಾತ್ವಿಕವಾಗಿ ಎದುರಿಸಲು ಸಾಧ್ಯವಾಗಲಿಲ್ಲವೇ?' ಎನ್ನುವ ಗಂಭೀರವಾದ ಪ್ರಶ್ನೆಯನ್ನು ಲಕ್ಷ್ಮೀಪತಿ ಕೋಲಾರ ಅವರ 'ದಕ್ಷಿಣ ದಂಡಾಜೀವಿಕ' ಕೃತಿಯ ಓದಿನ ಮೂಲಕ ಇಡುತ್ತಾರೆ. ಇಂಥದ್ದೇ ಪ್ರಶ್ನೆಯನ್ನು 'ಹಾಡು ಕಲಿಸಿದ ಹರ'

ಕೃತಿಯಲ್ಲಿ ಡಿ.ಆರ್ ಅವರ ಸಾಹಿತ್ಯದ ಸಾಂಸ್ಕೃತಿಕ ಪರಿಭಾಷೆಗಳನ್ನು ಬಳಸಿಕೊಂಡು 'ಮೂಲ ಮಾತೃಕೆ ಮತ್ತು ವಿದ್ರೋಹತನ'ದ ಕುರಿತು ಪ್ರಸ್ತಾಪಿಸುತ್ತ 'ದೇಸಿಯೊಳಗಣ ಮತ್ತೊಂದು ದೇಸಿ ದಂಗೆ' ಎಂದು ಹೇಳಿ ಮಂಟೆಸ್ವಾಮಿ, ಮಾದಪ್ಪ, ಜುಂಜಪ್ಪ, ಅಮೋಘಸಿದ್ಧ, ಬಿಳಿಯಾಣಸಿದ್ದ, ಬೀರಪ್ಪ, ಮಾಳಪ್ಪ, ಎಲ್ಲಮ್ಮ, ಮೈಲಾರನನ್ನು ಒಳಗೊಂಡ ಜನಪದ ಮಹಾಕಾವ್ಯಗಳಲ್ಲಿ ಬರುವ ಗೋರಕ್ಷನಾಥ, ಸಿದ್ಧಪರಂಪರೆ, ಕಾಲಜ್ಞಾನಿಗಳು, ಅವಧೂತರು, ಆರೂಢರು, ಈ ತರಹದ ಕಾಲುದಾರಿ ಪರಂಪರೆಗಳನ್ನು ವಚನಕಾರರ ಜೊತೆಗೆ ಮುಖಾಮುಖಿಯಾಗಿಸಿ ಚರ್ಚಿಸುತ್ತಾರೆ.

ಸಂಸ್ಕೃತ ಕಾವ್ಯ ಮೀಮಾಂಸೆಯಲ್ಲಿ ಬರುವ ರಸ, ಧ್ವನಿ, ಅಲಂಕಾರಗಳಿಗಿಂತ ವಿಭಿನ್ನವಾಗಿ ದೇಸಿ ಅವೈದಿಕ ಪರಂಪರೆಗಳಲ್ಲಿ ದರ್ಶನ, ಭಕ್ತಿ, ಅನುಭಾವ, ಸಂಸ್ಕೃತಿಗಳ ಮೂಲಕ ನೋಡುವುದನ್ನು 'ಬಯಲಾಗುವ ಪರಿ' ಕೃತಿಯ ಲಿಂಗಧ್ಯಾನಿ ಸಿದ್ದರಾಮೇಶ್ವರ ಕುರಿತ ಲೇಖನದಲ್ಲಿ ಮತ್ತು ಭಕ್ತಿಪಂಥ ಮತ್ತು ತಳಸಮುದಾಯದ ಅಭಿವ್ಯಕ್ತಿ ಕ್ರಮಗಳು ಲೇಖನದಲ್ಲಿ ಒಂದಷ್ಟು ಎಳೆಗಳು ಸಿಗುತ್ತವೆ. 'ಹಾಡು ಕಲಿಸಿದ ಹರ' ಕೃತಿಯಲ್ಲಿ ಪ್ರಸ್ತಾಪವಾಗುವ 'ದೇಸಿಯೊಳಗಣ ದೇಸಿದಂಗೆ' ಕುರಿತು ಅವರ ಪ್ರಾರಂಭದ ಕೃತಿಯಾದ ಬಯಲಾಗುವ ಪರಿಯಲ್ಲಿ ಅವರೇ ಹೇಳುವಂತೆ 'ವಚನಕಾರರು ದಾಸರನ್ನು ಮಾತ್ರ ನಾವು ಭಕ್ತಿಪಂಥಕ್ಕೆ ಎಳೆದು ತಂದು ಗಮನಿಸಲಾಗಿದೆ. ಆದರೆ ಕರ್ನಾಟಕ ಸಂಸ್ಕೃತಿಯನ್ನು ಕಟ್ಟುವುದರಲ್ಲಿ, ಕನ್ನಡ ಬದುಕನ್ನ ರೂಪಿಸುವಲ್ಲಿ ತತ್ವಪದಕಾರರು, ಅವಧೂತರು, ಕಾಲಜ್ಞಾನಿಗಳು, ಸೂಫಿಗಳು ಸಾಕಷ್ಟು ನೆರವಿಗೆ ಬಂದಿದ್ದಾರೆ. ಇವರಲ್ಲಿ ಬಹುತೇಕರು ತಳಸಮುದಾಯದಿಂದ ಬಂದಿದ್ದಾರೆ. ಹಾಗಾಗಿ ಭಕ್ತಿಪಂಥವನ್ನು ಅವಾಹಿಸಿಕೊಳ್ಳುವಾಗ ಹಲವು ಪ್ರಶ್ನೆಗಳು ಉದ್ಭವಿಸುತ್ತವೆ. ತಮ್ಮ ಅಂತರ್ಗತದಲ್ಲಿಯೇ ವೈರುಧ್ಯಗಳನ್ನು ಕಾಣಲು ಸಾಧ್ಯವೇ?' ಎನ್ನುವ ಅವರ ಗಂಭೀರವಾದ ಪ್ರಶ್ನೆ ಪ್ರಾರಂಭದ ಕೃತಿಯಲ್ಲಿಯ ವಿದ್ರೋಹತನವಾಗಿ ಕಾಣುತ್ತದೆ. ಮತ್ತು ಭಾಷೆ ಹಾಗು ಜೀವನ ಮೀಮಾಂಸೆಯ ಕುರಿತು ಸಿದ್ದರಾಮನಿಗಿದ್ದ ವಿದ್ವತ್ತನ್ನು ನೋಡುತ್ತಾರೆ. ವಚನಸಾಹಿತ್ಯದಲ್ಲಿ ಚರ್ಚೆಗೆ ಒಳಗಾಗದ ಗೊಲ್ಲಾಳನನ್ನೂ ಇಲ್ಲಿ ಚರ್ಚೆಗೆ ಎತ್ತಿಕೊಳ್ಳುತ್ತಾರೆ. ಕನಕದಾಸ ಮತ್ತು ಶರೀಫರನ್ನು ಎದರು ಬದರಾಗಿಟ್ಟು ಇಲ್ಲಿ ನೋಡಿದ್ದು ಕೂಡ ಕೀರ್ತನೆ ಮತ್ತು ತತ್ವಪದಗಳನ್ನು ಲಯ, ದರ್ಶನಾದಿಗಳ ಹಿನ್ನಲೆಯಲ್ಲಿ ಸಮಂಜಸವೇ.

ಮೌಖಿಕ ಪರಂಪರೆಗಳು ಅಥವ ತೋಂಡಿ ಸಂಪ್ರದಾಯಗಳ ಮೇಲೆ ಅತಿ ಹೆಚ್ಚು ಕುತೂಹಲ ತಾಳಿರುವ ನಾಗಲಮಡಿಕೆ ಅವರು ಶರಣರು, ದಾಸರು, ತತ್ವಪದಕಾರರು, ಕಾಲಜ್ಞಾನಿಗಳು, ಅವಧೂತರು ಮತ್ತು ಜನಪದ ಮಹಾಕಾವ್ಯದ ಸಮೂಹ ನಾಯಕರ ಕುರಿತು ಇನ್ನೆರಡು ಕೃತಿಗಳಾದ 'ಕನಕ ಸಾಹಿತ್ಯ ಅಧ್ಯಯನ ಮತ್ತು ಹಾಡು ಕಲಿಸಿದ ಹರ'ದಲ್ಲಿ ಚರ್ಚೆಗೆ ಎತ್ತಿಕೊಳ್ಳುತ್ತಾರೆ. 'ಬಯಲಾಗುವ ಪರಿ' ಕೃತಿಯಲ್ಲಿ ಕನಕದಾಸರ ಕುರಿತು ಬಿಡಿ ಬಿಡಿಯಾಗಿ ನೋಡಿದ್ದ ಅವರು, 'ಕನಕ

ಸಾಹಿತ್ಯ ಅಧ್ಯಯನ' ಕೃತಿಯಲ್ಲಿ ಇಡಿಯಾಗಿ ನೋಡುತ್ತಾರೆ. ಈ ಕೃತಿಯ ಶೀರ್ಷಿಕೆ ಕನಕದಾಸರನ್ನು ಕೇಂದ್ರೀಕರಿಸಿದಂತೆ ಕಂಡರೂ ಕೃತಿಯ ಒಳಗಡೆ ಕನಕದಾಸರನ್ನೂ ಒಳಗೊಂಡು ಅನೇಕ ದರ್ಶನಗಳನ್ನು, ಸಾಂಸ್ಕೃತಿಕ ಮಗ್ಗಲುಗಳನ್ನು ಹಾಯ್ದು ಬರುತ್ತಾರೆ. ಕನಕದಾಸರು ಶೈವಮತದಲ್ಲಿ ಬರುವ ಜನಸಮುದಾಯದ ನುಡಿಗಟ್ಟುಗಳು ಮಧ್ವಮತದ ದೈವದ ಕುರಿತು ಹಾಡುವಾಗ ಹೇಗೆ ಎಡೆಬಿಡದೆ ಬರುತ್ತಾವೆನ್ನುವುವು ಇಲ್ಲಿ ಕಾಣುತ್ತವೆ. ಕನಕನ ಒಟ್ಟು ಕೃತಿಗಳು, ಕೀರ್ತನೆಗಳು. ಮುಂಡಿಗೆಗಳನ್ನು ಪರಿಶೀಲಿಸಿ ಅಲ್ಲಿ ಬರುವ ನಿಸರ್ಗ, ಪ್ರಭುತ್ವ, ಹೆಣ್ಣು, ಸಾಂಸ್ಕೃತಿಕ ನಾಯಕತ್ವದ ಪ್ರಶ್ನೆ ಹೀಗೆ ಅನೇಕ ಆಯಾಮಗಳಲ್ಲಿ ನೋಡಿದ್ದಾರೆ. ಈ ಕೃತಿಯನ್ನು ಇಡಿಯಾಗಿ ಓದಿದಾಗ ಕನಕದಾಸರು ಸಾಂಸ್ಕೃತಿಕ ಒತ್ತಡಕ್ಕೆ ಒಳಗಾಗಿ ಜನಪದ ದೈವಗಳನ್ನು ಝಾಡಿಸುವುದರ ಮೂಲಕ ಶ್ರೀಮನ್ ಮಧ್ವಮತದ ಪ್ರತಿಪಾದಕರಷ್ಟೆ ಆಗಿರಲಿಲ್ಲ; ಅದರಾಚೆಗೂ ಅವರ ಇಡೀ ಬದುಕಿನ ಏಳುಬೀಳುಗಳು, ಮತ್ತು ಸಾಮುದಾಯಿಕ ಬದ್ಧತೆಯ ಕುರಿತು ಈ ಕೃತಿ ಬಿಚ್ಚಿಡುತ್ತದೆ. ನಾಗಲಮಡಿಕೆ ಅವರು ಈ ಕೃತಿಯಲ್ಲಿ ಮತ್ತು ಹಾಡು ಕಲಿಸಿದ ಹರ ಕೃತಿಯಲ್ಲಿ ಸಾಂಸ್ಕೃತಿಕ ನಾಯಕರನ್ನು ಆಯ್ಕೆಮಾಡಿಕೊಳ್ಳುವಲ್ಲಿ ತಳಸಮುದಾಯಗಳು ಹೇಗೆ ದಿಕ್ಕು ತಪ್ಪಿದ್ದಾವೆನ್ನುವುದನ್ನು ಎಚ್ಚರಿಸುತ್ತಾರೆ. ಹಾಗೆ ಎಚ್ಚರಿಸುವುದು ಬರಿ ಬೀಸು ಹೇಳಿಕೆಯ ಮೂಲಕವಾಗಿರದೆ, ಈ ಮೂರೂ ಕೃತಿಗಳಲ್ಲಿ ತಮ್ಮ ಅಧ್ಯಯನದ ಮೂಲಕ ಎಳೆ ಎಳೆಯಾಗಿ ಬಿಚ್ಚಿಡುತ್ತಾರೆ. ಮುಖ್ಯವಾಗಿ ಕನಕದಾಸನನ್ನು ಈಗಾಗಲೆ ಮಧ್ವಮತಕ್ಕಷ್ಟೆ ಶಿಫ್ಟ್ ಮಾಡಲಾಗಿದೆ. ಅಲ್ಲಿಂದ ಆತನನ್ನು ಬಿಡಿಸಿಕೊಳ್ಳುವ ಪ್ರಯತ್ನ ಆತನ ಒಟ್ಟು ಬರೆಹಗಳ ಮೂಲಕವೇ ಮಾಡಿದ್ದಾರೆ.

**ಹಾಡು ಕಲಿಸಿದ ಹರದಲ್ಲಿ-ಅಜ್ಞಾತ ಜ್ಞಾನಪರಂಪರೆಗಳ ವಿದ್ರೋಹತನ**

**ಹಾಡಿದವರಿಗಿ ಆರು ಹಣ್ಣ**
**ಕೇಳಿದವರಿಗಿ ಮೂರು ಹಣ್ಣ**
**ಕಲಿಸಿದವರಗಿ ಕೈಲಾಸೇಳಯ್ಯ**
**ಶಿವ ಸಿದ್ದರಾಮ ಕಲಿಸಿದವರಿಗಿ ಕೈಲಾಸೇಳಯ್ಯ**

ಇದು ನಮ್ಮ ತಾಯಿಯವರು ಬೀಸುಕಲ್ಲಿನಲ್ಲಿ ಗೋಧಿ ನುಚ್ಚು ಒಡೆಯುವಾಗ ಹಾಡುತ್ತಿದ್ದ ಹಾಡು. ಇದರಲ್ಲಿ ಬರುವ ಸಂಖ್ಯಾವಾಚಕ ಪದಗಳು ದರ್ಶನಕ್ಕೆ ಸಂಬಂಧಿಸಿದಂಥವು. ಈ ಆರು ಎನ್ನುವ ಸಂಖ್ಯಾವಾಚಕ ಪದವನ್ನು ಕಡಕೋಳದ ಮಡಿವಾಳಪ್ಪ ನಕಾರ, ಮಕಾರ, ಶಿಕಾರ, ವಕಾರ, ಯಕಾರ, ಓಂಕಾರ, ವೆಂದು ಹೇಳುತ್ತಾರೆ. ಮತ್ತು ಮೂರು ಎನ್ನುವ ಸಂಖ್ಯಾವಾಚಕ ಪದವನ್ನು ನಾದ, ಬಿಂದು, ಕಳಾತೀತ,ವೆಂದು ಹೇಳುತ್ತಾರೆ. ಹಾಗಾಗಿಯೇ 'ಅಂತರಂಗದ ಗುಡಿಯವಳಗ/ಎಂಥ ದೇವರು ಕಂಡೇನಾ/ ಆರುಮೂರು ಊರುಕೇರಿ/ಏರಿಮೇಲಕೆ ಹೋದೆನಾ'

ಈ ತರಹದ ತತ್ವಪದಗಳು ಸಾಧನಾ ಮಾರ್ಗದಲ್ಲಿ ಎಡೆಬಿಡದೆ ಬರುತ್ತವೆ. ಇದೊಂದು ಬೇರೆ ತರಹದ ಚರ್ಚೆ, ಸದ್ಯಕ್ಕೆ ಆ ಚರ್ಚೆಗೆ ಹೋಗದೆ, ಇಲ್ಲಿಯ ಹಾಡಿನ ಮೂರನೇ ಸ್ಟಾಂಜ 'ಕಲಿಸಿದವರಿಗಿ ಕೈಲಾಸೇಳಯ್ಯ' ಎನ್ನುವ ಸಾಲು 'ಹಾಡು ಕಲಿಸಿದ ಹರ' ಎನ್ನುವ ಶೀರ್ಷಿಕೆಯಲ್ಲಿರುವ 'ಹರಕ್ಕು' ಮತ್ತು ನಮ್ಮ ತಾಯಿಯವರ ಕಂಠದಿಂದ ಬರುವ 'ಕೈಲಾಸಕ್ಕು' ಸಾಮ್ಯತೆ ಇರುವುದು ಕಂಡು ಬರುವುದರಿಂದ ಇವೆಲ್ಲವೂ ಮೌಖಿಕ ಪರಂಪರೆಗೆ ಸೇರಿದ ಅವೈದಿಕ ಪರಂಪರೆಗಳೆಂದು ಕರೆಯಬೇಕಾಗುತ್ತದೆ.

ಸುರೇಶ್ ನಾಗಲಮಡಿಕೆ ಅವರು ಈ 'ಹಾಡು ಕಲಿಸಿದ ಹರ' ಕೃತಿಯಲ್ಲಿ ನಾಲ್ಕು ಜನಪದ ಮಹಾ ಕಾವ್ಯಗಳಾದ 'ಮಂಟೇಸ್ವಾಮಿ', 'ಮಲೆ ಮಾದೇಶ್ವರ', 'ಜುಂಜಪ್ಪ', ಜನಪದ ಹಾಲುಮತ ಮಹಾಕಾವ್ಯ ಮತ್ತು ಜನಪದ ಮಹಾಭಾರತಗಳಂಥ ಮೂಲ ಪಠ್ಯಗಳನ್ನು ಅನುಲಕ್ಷಿಸುವುದರ ಜೊತೆಗೆ ಇಡೀ ಕರ್ನಾಟಕವನ್ನು ಮತ್ತು ಕೆಲವು ಗಡಿಭಾಗಗಳ ತೋರುಗದ್ದುಗೆಗಳಿಗೆ ಸುತ್ತಾಡಿ ಮಹಾಕಾವ್ಯಗಳಲ್ಲಿ ಬರುವ ನಾಯಕರು ಮತ್ತು ಜನಪದರಲ್ಲಿ ಇವತ್ತಿಗೂ ಇರುವ ಕೆಲವು ಮಿತ್‌ಗಳು, ನಂಬಿಕೆಗಳನ್ನು ಗಂಭೀರವಾಗಿ ಪರಿಶೀಲಿಸಿ ಕಟ್ಟಿದ ಈ ಪುಸ್ತಕವು ಪ್ರಾರಂಭದಲ್ಲಿ ಈ ವರೆಗಿನ ಕನ್ನಡ ಸಾಹಿತ್ಯ ಚರಿತ್ರೆ ಕಟ್ಟಿದ ಕ್ರಮದ ಕುರಿತು ಗಂಭೀರವಾಗಿ ಚರ್ಚೆಗೆ ಎತ್ತಿಕೊಳ್ಳುತ್ತಾರೆ. ದಕ್ಷಿಣ ಕರ್ನಾಟಕದ ಮಹಾಕಾವ್ಯಗಳಾದ ಮಂಟೇಸ್ವಾಮಿ, ಮಲೆ ಮಾದೇಶ್ವರ, ಜುಂಜಪ್ಪರ ಕುರಿತು ಈಗಾಗಲೇ ಸಾಕಷ್ಟು ಚರ್ಚೆಗಳಾಗಿದ್ದಾವೆ. ಎಚ್. ಎಸ್.ಶಿವಪ್ರಕಾಶರಂಥವರು ಈ ಕುರಿತು ಗಂಭೀರ ನಾಟಕಗಳೇ ಬರೆದಿದ್ದಾರೆ. ಹಾಡು ಕಲಿಸಿದ ಹರ ಕೃತಿಯಲ್ಲಿ ಜನಪದ ಹಾಲುಮತ ಕಾವ್ಯವೇ ಹೆಚ್ಚು ಫೋಕಸ್ ಆಗಿರುವುದಕ್ಕೆ ಮುಖ್ಯಕಾರಣ; ಈ ವರೆಗಿನ ಜನಪದ ಮಹಾ ಕಾವ್ಯಗಳ ತಾತ್ವಿಕ ಅಧ್ಯಯನದ ಸಂದರ್ಭದಲ್ಲಿ ಜನಪದ ಹಾಲುಮತ ಕಾವ್ಯದ ಕುರಿತ ಅಧ್ಯಯನದ ಗ್ಯಾಪುಗಳೂ ಮುಖ್ಯ ಕಾರಣವಾಗಿರಬಹುದು? ಜನಪದ ಹಾಲುಮತ ಕಾವ್ಯವು ಸಮೂಹ ನಾಯಕತ್ವದಿಂದ ಕೂಡಿದೆ. ಇಂಥ ಸಮೂಹದಲ್ಲಿ ಒಬ್ಬರಾದ 'ಅಮೋಘಸಿದ್ಧ'ನ ಕುರಿತು ಡಾ.ಚೆನ್ನಪ್ಪ ಕಟ್ಟಿಯವರು ಗಂಭೀರವಾದ ಅಧ್ಯಯನವನ್ನು ಕೈಗೊಂಡಿದ್ದನ್ನು ಬಿಟ್ಟರೆ ಇನ್ನುಳಿದಂತೆ ಈ ಸಮೂಹ ನಾಯಕರ ಮೇಲೆ ಈ ರೀತಿಯ ತಾತ್ವಿಕ ಅಧ್ಯಯನಗಳು ಇಲ್ಲವೆನ್ನುವಷ್ಟರ ಮಟ್ಟಿಗೆ ಕಡಿಮೆ. ಅದನ್ನು ನಾಗಲಮಡಿಕೆಯವರು ವ್ಯವಧಾನದ ಮೂಲಕ ಮಾಡಿದ್ದಾರೆ.

'ಸಾಹಿತ್ಯ ಚರಿತ್ರೆಕಾರ ಮತ್ತು ಇತಿಹಾಸಕಾರ ಇಬ್ಬರೂ ಮೌಖಿಕ ಚರಿತ್ರೆಯನ್ನು ಗೌಣಗೊಳಿಸಿರುವುದು' ಎನ್ನುವ ಮೂಲಕ ಪ್ರಾರಂಭವಾಗುವ ಅಧ್ಯಯನ ಮೌಖಿಕ ಚರಿತ್ರೆಯು ಗೌಣವಾಗಲು ಮೂಲಭೂತ ಕಾರಣಗಳನ್ನು ಎಳೆ ಎಳೆಯಾಗಿ ಬಿಚ್ಚಿಡುತ್ತ ಸಾಗುತ್ತದೆ. 'ಕನ್ನಡದ ಬಹುತೇಕ ಮೌಖಿಕ ಕಾವ್ಯಗಳು ಶೈವ ಕೇಂದ್ರಿತವಾಗಿವೆ' ಎಂದು ಹೇಳುತ್ತ. ಅಲ್ಲಿಯ ಕಾವ್ಯಗಳಲ್ಲಿ

ಬರುವ ಮಂಟೇಸ್ವಾಮಿ, ಮಾದಪ್ಪ. ಜುಂಜಪ್ಪ, ಅಮುಗಿಸಿದ್ಧರಂಥವರು ಮೂಲತಃ ಆದಿಮ ಶೈವ ಪರಂಪರೆಗೆ ಸೇರಿದವರು ಎನ್ನುವುದನ್ನು ಅನೇಕ ಪದ್ಯಗಳ ಮೂಲಕ ಉದಾಹರಿಸುತ್ತಾರೆ. ಜುಂಜಪ್ಪನ ಕಾವ್ಯ ಮತ್ತು ಹಾಲುಮತ ಕಾವ್ಯ ಇವೆರಡು ಕುಲ ಮತ್ತು ವೃತ್ತಿಯ ಹಿನ್ನಲೆಯಲ್ಲಿ ಸಾಂಸ್ಕೃತಿಕ ಸಾಮ್ಯತೆಯ ಕುರಿತು ವಿಶ್ಲೇಷಿಸಿದ್ದಾರೆ. ಇವತ್ತಿಗೂ ಕರ್ನಾಟಕ ಮತ್ತು ಆಂದ್ರದಲ್ಲಿ ಗೊಲ್ಲ, ಕುರುಬ ಸಮುದಾಯಗಳ ಸಾಂಸ್ಕೃತಿಕ ಸಾಮ್ಯತೆ ಇರುವುದು ಕಂಡುಬರುತ್ತದೆ.

ಇಲ್ಲಿಯ ಮಹಾ ಕಾವ್ಯಗಳಲ್ಲಿ ಬರುವ ಸಮೂಹ ನಾಯಕರು ಮೂಲತಃ ಸಿದ್ಧ ಮತ್ತು ನಾಥಪಂಥಕ್ಕೆ ಸೇರಿದವರು ಎನ್ನುವುದು ಗೋರಕ್ಷನಾಥ, ಅಲ್ಲಮ, ಸಿದ್ಧರಾಮ ಇವರ ಮೂಲಕ ಬರುವ ಪದ್ಯಗಳಿಂದ ತಿಳಿದು ಬರುತ್ತದೆ. ಶರಣರ ಇಷ್ಟಲಿಂಗದ ಪರಿಕಲ್ಪನೆಯನ್ನು ನಿರಚನಗೊಳಿಸುವುದು ಮಂಟೇಸ್ವಾಮಿಯ ಕಲ್ಯಾಣ ಪ್ರಸಂಗ ಮತ್ತು ಅಮೋಘಸಿದ್ಧನಿಗೆ ಲಿಂಗ ದೀಕ್ಷೆಕೊಡಲು ಬಂದ ಸಿದ್ಧರಾಮನ ಪ್ರಸಂಗಗಳನ್ನು ಗಮನಿಸಿದರೆ 'ದೇಸಿಯೊಳಗಣ ದೇಸಿ ದಂಗೆ' ಕಂಡು ಬರುವುದರಿಂದ; ವಿದ್ರೋಹತನ ಎಳೆಗಳು ಮುಖ್ಯವಾಗಿ ಇಲ್ಲಿ ಸಿಗುತ್ತವೆ. ಆದರೆ ಸಿದ್ಧರಾಮನಿಗಿದ್ದ ಜೀವನ ಮೀಮಾಂಸೆ ಮತ್ತು ಭಾಷಾ ಪ್ರಬುದ್ಧತೆ ಕುರಿತು 'ಬಯಲಾಗುವ ಪರಿ'ಯಲ್ಲಿ ಚರ್ಚಿಸುವ ನಾಗಲಮಡಿಕೆಯವರು, ಬಿಬಿಲಾದ ಪ್ರದೇಶದ ಜನಪದರ ಕತೆಯಲ್ಲಿ ಭಕ್ತಿಯ ಸ್ಥಿತಿಯಲ್ಲಿರುವ ಸಿದ್ಧರಾಮ ಕೃತಿಯ ಎರಡುಮೂರು ಕಡೆ ಈ ಪ್ರಸಂಗವನ್ನು ತರುತ್ತಾರೆ. ಸಿದ್ಧರಾಮನಿಗೆ ನಿಜವಾಗಲು ಲಿಂಗದೀಕ್ಷೆ ಆಗಿತ್ತೆ? ಆಗಿದ್ದರೆ ಯಾರಿಂದ ಆಗಿತ್ತು? ಆದ ನಂತರ ಅವನು ಅಲ್ಲಮ, ಮಂಟೇಸ್ವಾಮಿ, ಅಮೋಘಸಿದ್ಧ, ಬಿಳಿಯಾನಸಿದ್ಧರಂಥವರಂತೆ ಅನುಭಾವದ ಆತ್ಯಂತಿಕ ಸ್ಥಿತಿ ತಲುಪಿದ್ದು ಯಾವಾಗ? ಎನ್ನುವ ಕುರಿತು ಚರ್ಚಿಸುವುದಿಲ್ಲ. ಮೊದಲೇ ಹೇಳಿದಂತೆ ಇಲ್ಲಿಯ ಕೃತಿಗಳು ಮೌಖಿಕ ಪರಂಪರೆಗೆ ಸಂಬಂಧಿಸಿರುವುದರಿಂದ ಜನಪದರಿಗೆ ಚರಿತ್ರೆಯ ಸಂಗತಿಗಳು ಮುಖ್ಯವಾಗುವುದೇ ಇಲ್ಲ. 'ಬಯಲಾಗುವ ಪರಿ' ಕೃತಿಯ ಲಿಂಗಧ್ಯಾನಿ ಸಿದ್ಧರಾಮ ಲೇಖನದಲ್ಲಿ ಆತನಿಗಿದ್ದ ಅನುಭಾವಿಕ ಸ್ಪೇಸ್ 'ಹಾಡು ಕಲಿಸಿದ ಹರ' ಕೃತಿಯಲ್ಲಿ ತುಸು ಗ್ಯಾಪ್ ಅನ್ನಿಸುತ್ತದೆ. ಮತ್ತು ಆತನ ವಚನವನ್ನೇ ಗಮನಿಸಿದರೆ ಆತನೂ ಇಷ್ಟಲಿಂಗವನ್ನು ಸಾಧನೆಯ ಒಂದು ಹಂತವಾಗಿ ಅಷ್ಟೆ ತೆಗೆದುಕೊಂಡಿರುವುದು ಕಂಡುಬರುತ್ತದೆ.

**ಕಟ್ಟಿದ ಕಲ್ಲ ಲಿಂಗವ ಮಾಡಿಕೊಟ್ಟಾತ ಗುರುವೆಂಬರು**
**ಆ ಲಿಂಗವ ಧರಿಸಿದಾತ ಶಿಷ್ಯನೆಂಬರು**
**ಕೊಟ್ಟಗುರು ದೇಶಪಾಲಾದ**
**ಕೊಟ್ಟಕಲ್ಲು ಲಿಂಗವೋ**
**ಕಲ್ಲಿನ ಕಲ್ಲು ಕಲ್ಲೆಂಬಡೆ**
**ಲಿಂಗವ ಮಾಡಿಕೊಟ್ಟ ಲಿಂಗವೆಂದಡೆ**
**ಪೂಜಾ ವಿರಹಿತವಾಯಿತು**

**ಪೂಜವಿಲ್ಲದ ಲಿಂಗ ಪಾಷಾಣ**
**ಹೋದ ಗುರುವಿನ ಲಿಂಗ ಪಾಷಾಣ ಬೇಧಿ**
**ಬೇಧಿಸಿದರೆ ಹುರುಳಿಲ್ಲ**
**ನದಿಯ ದಾಟುವಲ್ಲಿ ಪೈಂತ್ರವ ಹಿಡಿದು**
**ದಾಟಿದಂತ್ಯದಲ್ಲಿ ಬಿಟ್ಟು ಹೋದರು**
**ಬಿಟ್ಟ ನಾವೆ ಮತ್ತೊಬ್ಬರಿಗೆ ಲೇಸು**
**ಆ ಲಿಂಗ ಬರದು ಆರಿಗೆ ನೋಡಾ**
**ಕಪಿಲ ಸಿದ್ದ ಮಲ್ಲಿಕಾರ್ಜುನಾ**

ಇಷ್ಟಲಿಂಗವನ್ನು ಸಮುದ್ರ ದಾಟುವಾಗ ಕೇವಲ ನಾವಿಯಂತೆ ಬಳಸಬೇಕೆನ್ನುವ ಸಿದ್ದರಾಮನು ಅಮೋಘಸಿದ್ಧನಿಗೆ ಲಿಂಗದೀಕ್ಷೆ ಕೊಡುವಷ್ಟು ಮುಗ್ಧನಾಗಿರಲಿಕ್ಕಿಲ್ಲವೆನ್ನುವುದರ ಕುರಿತು ಆಲೋಚಿಸಬೇಕಾಗುತ್ತದೆ. ಸೊನ್ನಲಾಪೂರ, ಹುಲಿಜಂತಿ, ಅರಿಕೇರಿ ಮತ್ತು ಬಿಬಿಲಾದ ಊರುಗಳು ಒಂದೇ ಭೌಗೋಳಿಕ ಪ್ರದೇಶಕ್ಕೆ ಸಂಬಂಧಿಸಿರುವದರಿಂದ ಸಿದ್ಧರಾಮ, ಮಾಳಪ್ಪ, ಅಮೋಘಸಿದ್ಧರಂಥವರನ್ನು ಕುರಿತು ಜನಪದರು ಅಭಿನ್ನವಾದ ಮಿತ್‌ಗಳನ್ನು ಕಟ್ಟಿಕೊಂಡಿದ್ದಾರೆ. ಇಲ್ಲಿ ಇನ್ನೊಂದು ಮುಖ್ಯ ಸಂಗತಿ ಏನೆಂದರೆ, ಅವರೇ ಬಳಸಿಕೊಂಡಿರುವ ರೇವಣಸಿದ್ಧನ ಕುರಿತು ಎಮ್.ಎಮ್.ಕಲ್ಬುರ್ಗಿಯವರ ಮಾತು 'ಮಧ್ಯಕಾಲೀನ ಕರ್ನಾಟಕದಲ್ಲಿ ಲಕುಲೀಶ(ಕಾಳಮುಖ), ಪಾಶುಪತವೆಂಬ ಶಿವಪರ ಪಂಥಗಳು ಪ್ರತ್ಯೇಕಿಸಿ ತೋರಿಸಲಾಗದಷ್ಟು ಪರಸ್ಪರ ಸಾದೃಶ್ಯ ಹೊಂದಿದ್ದವೆಂದು ಶಾಸನಗಳಿಂದ ತಿಳಿದುಬರುವುರಿಂದ ವಿದ್ವಾಂಸರು ಇವೆರಡೂ ಪಂಥಗಳಿಗೆ ಲಾಕುಳಶೈವರೆಂದು ಕರೆಯುತ್ತಲಿದ್ದಾರೆ. ಆ ಕಾಲದಲ್ಲಿದ್ದ ಇನ್ನೊಂದು ಶೈವ ಸಂಪ್ರದಾಯವೆಂದರೆ ರೇವಣಸಿದ್ಧ ಸಿದ್ಧರಾಮರ ಪಂಥ' ಎನ್ನುವ ಮಾತಿಗೆ ನಾಗಲಮಡಿಕೆಯವರ ಮಾತು 'ಆದರೆ ಹಾಲುಮತ ಕಾವ್ಯದಲ್ಲಿ ಬರುವ ರೇವಣಸಿದ್ಧ ಮತ್ತು ಸಿದ್ಧರಾಮ ಇಬ್ಬರದೂ ಮತ್ತೊಂದು ಶೈವಪಂಥವೆಂಬುದು ವಾಸ್ತವಕ್ಕೆ ಹತ್ತಿರವೆನಿಸಿದರೂ ಹಾಲುಮತದಲ್ಲಿ ಉತ್ತರ ಕರ್ನಾಟಕದಲ್ಲಿ ಮತ್ತೊಬ್ಬ ಸಿದ್ಧನಾದ ಅಮೋಘಸಿದ್ಧನದೇ ಒಂದು ಪರಂಪರೆ ಇದೆ ಎಂಬುದನ್ನು ಮರೆಯುತ್ತಾರೆ. ಅಮೋಘಸಿದ್ಧನ ನೆಲೆ ಅರಿಕೇರಿಯಲ್ಲದೇ ಅವನ ಮಕ್ಕಳಾದ ಮಳಸಿದ್ಧ, ಅವಧೂತ ಸಿದ್ಧ, ಮಳಕಾರಿ ಸಿದ್ಧ, ಬಿಳಿಯಾಣ ಸಿದ್ಧರು ಈ ಪರಂಪರೆಯನ್ನು ಮುಂದುವರೆಸಿದಂತೆ ಕಾಣುತ್ತದೆ. ರೇವಣಸಿದ್ಧ, ಅಮೋಘಸಿದ್ಧ, ಸಿದ್ಧರಾಮ ಇವರೆಲ್ಲ ಹಾಲುಮತ ಕಾವ್ಯದಲ್ಲೇ ಬರುತ್ತಾರೆ. ರೇವಣ ಮತ್ತು ಸಿದ್ಧರಾಮ ವೀರಶೈವ ಮತ್ತು ಶರಣ ಧರ್ಮದ ಕಾಲಕ್ಕೆ ಅಂಟಿಕೊಂಡರೆ, ಅಮೋಘಸಿದ್ಧ ಪ್ರತ್ಯೇಕವಾಗಿಯೇ ನಿಂತಿದ್ದಾನೆ'. ಎಂದು ಹೇಳುತ್ತಾರೆ. ಇದೇ ಭಾಗದವರಾದ ಎಮ್.ಎಮ್.ಕಲ್ಬುರ್ಗಿಯವರಿಗೆ ಅಮೋಘಸಿದ್ಧ ಗೊತ್ತಿರದೇ ಇರುವವರು ಅಲ್ಲ. ನಾಗಲಮಡಿಕೆ ಅವರು ಹಾಲುಮತ ಕಾವ್ಯದಲ್ಲಿ ಉಲ್ಲೇಖವಾಗಿರುವ ಅಮೋಘಸಿದ್ಧ ಮತ್ತು ಕಟ್ಟು ಲಿಂಗಗಳನ್ನು ಮಾಯಮಾಡಿದ ಬಿಳಿಯಾಣಸಿದ್ಧ ಗುರು ಸೋಮಲಿಂಗನನ್ನು ತೋರಿಸಿ ಸಿದ್ಧ ಪರಂಪರೆಯಲ್ಲಿಯೇ ಉಳಿದು ಬಿಡುತ್ತಾನೆ ಮತ್ತು ಅಮೋಘಸಿದ್ಧ, ಸಿದ್ಧರಾಮ, ಮತ್ತು ಕೊಂತೆವ್ವನ ನಡುವೆ ನಡೆಯುವ ಸಂವಾದ ಇವೆಲ್ಲವೂ

ಎಮ್.ಎಮ್ ಕಲ್ಬುರ್ಗಿ ಅವರಿಗೆ ವೀರಶೈವ ಅಥವ ಲಿಂಗಾಯತ ದರ್ಶನವನ್ನು ನೋಡುವಲ್ಲಿ ಅಲ್ಲಮನಷ್ಟೆ ಅಮೋಘಸಿದ್ಧನ ಪರಂಪರೆಯು ತೊಡಕಾಗಿರಬಹುದು. ಇವತ್ತಿಗೂ ಅಮೋಘಸಿದ್ಧನ ಆರಾಧಕರಾದ ಒಡೆಯರರು ಗುರುಪರಂಪರೆಯಲ್ಲಿದ್ದಾರೆ. ಇವರು ಕುರುಬರ ಮನೆಯಿಂದ ಹೆಣ್ಣು ತೆಗೆದುಕೊಳ್ಳುತ್ತಾರಾದರೂ ತಮ್ಮ ಹೆಣ್ಣನ್ನು ಕುರುಬರಿಗೆ ಕೊಡುವುದಿಲ್ಲ. ಕುರುಬರ ಮದುವೆ-ಮನೆಶಾಂತಿಗಳಂಥ ಸಂದರ್ಭದಲ್ಲಿ ಜಂಗಮರಂತೆ ಗುರು ಸ್ವರೂಪದಲ್ಲಿ ಹೋಗುತ್ತಾರೆ. ಆದರೆ ಜಂಗಮರನ್ನೂ ಒಳಗೊಂಡು ಇನ್ನುಳಿದ ಸಮುದಾಯಗಳು ಇವರನ್ನು 'ಕುರುಬರೆಂದೆ' ಕರೆಯುತ್ತಾರೆ. ಈ ಕುರಿತು ಸಿ. ಜಿ ಬಿರಾದಾರ ಅವರು 'ಕುರುಬರ ಗುರು ಒಡೆಯರು' ಎನ್ನುವ ಸಂಶೋಧನಾ ಮಹಾ ಪ್ರಬಂಧವೇ ಬರೆದಿದ್ದಾರೆ. ಆದರೆ ಅವರು ರೇವಣಸಿದ್ಧ ಮತ್ತು ಅಮೋಘಸಿದ್ಧ ಇಬ್ಬರನ್ನೂ ಒಂದೇ ತಕ್ಕಡಿಯಲ್ಲಿಟ್ಟು ನೋಡುತ್ತಾರೆ. ಅಮೋಘಸಿದ್ಧನದೇ ಒಂದು ಪರಂಪರೆಯನ್ನು ಹೇಳುವ ನಾಗಲಮಡಿಕೆಯವರು ಕೇವಲ ಅರಿಕೇರಿಯನ್ನಷ್ಟೆ ಕೇಂದ್ರವಾಗಿ ಇಟ್ಟುಕೊಂಡಿದ್ದಾರೆ. ಅಮೋಘಸಿದ್ಧನ ಚಹರೆಗಳು ಕಲ್ಲೂರು, ಕಕ್ಕಳಮೇಲಿ. ಮೋರಟಗಿ, ಜೇರಟಗಿ, ಮುರಗಾನೂರು, ಮಾನಸುಣಗಿ, ದೇಸುಣಗಿಯಂಥ ಊರುಗಳಲ್ಲಿ ಅಮೋಘಸಿದ್ಧನ ತೋರು ಗದ್ದಿಗೆಗಳು ಇವತ್ತಿಗೂ ಇದ್ದಾವೆ. ಅಲ್ಲಿಯ ಮೌಖಿಕ ಮಿತ್‌ಗಳನ್ನು ಬಳಸಿಕೊಂಡಿದ್ದರೆ ಅಮೋಘಸಿದ್ಧನ ಕುರಿತು ಚಿಂತಿಸಲು ಮತ್ತಷ್ಟು ಸ್ಪೇಸ್ ದೊರೆಯುತ್ತಿತ್ತು.

ವಚನಕಾರರ ಮತ್ತು ಅವರ ಇಷ್ಟಲಿಂಗದ[ಕಟ್ಟುಲಿಂಗ]ಪರಿಕಲ್ಪನೆಯ ನಂತರ ಬಂದ ಮಂಟೇಸ್ವಾಮಿ, ಮಾದಪ್ಪ, ಅಮೋಘಸಿದ್ಧರಂಥವರ ಹುಟ್ಟುಲಿಂಗ ಪರಿಕಲ್ಪನೆಯು ವಿದ್ರೋಹತನವಾಗಿಯೇ ಕಂಡುಬರುತ್ತದೆ. ಇಂಥ ವಿದ್ರೋಹತನವನ್ನು ಸಾಹಿತ್ಯದ ದೃಷ್ಟಿಯಲ್ಲಿಯೂ ನೋಡಬಹುದು. ಪ್ರಾರಂಭದಲ್ಲಿ ಅವರೇ ಹೇಳುವಂತೆ 'ಸಾಹಿತ್ಯ ಚಿಂತನೆಯನ್ನು ಕೇವಲ ಸಂಸ್ಕೃತ ಮೀಮಾಂಸೆಯ ಮಾದರಿಗಳ ಬೆನ್ನಲ್ಲಿ ವಿವೇಚಿಸುವುದು ಅಲ್ಲ; ಅದರ ಜೊತೆಗೆ ಅಥವ ಭಿನ್ನವಾಗಿ ಜನಪದ ಚಿಂತನೆಯನ್ನು ಒಳಗು ಮಾಡಿಕೊಂಡು ವಿವರಿಸುವುದು ಅಗತ್ಯವಿದೆ' ಎಂದು ಹೇಳುತ್ತಾರೆ. ಜನಪದ ಕಾವ್ಯಗಳ ಭಾಷೆ, ಲೋಕದೃಷ್ಟಿ, ಆಶಯ, ಆಕೃತಿ, ಸೌಂದರ್ಯಗಳ ಕುರಿತು ವಿಭಿನ್ನವಾಗಿಯೇ ವಿಶ್ಲೇಷಿಸುತ್ತಾರೆ. ಆದರೆ ಹೀಗೆ ವಿಶ್ಲೇಷಿಸುವಾಗಿನ ದೇಸಿಯ ಫಾರ್ಮ್‌ನ್ನು 'ಪ್ರದರ್ಶನ ಮತ್ತು ಬೈಟಕ್' ಮೂಲಕ ನೋಡುತ್ತಾರೆ. ಸಂಸ್ಕೃತ ಕಾವ್ಯ ಮೀಮಾಂಸೆಯು ಸೌಂದರ್ಯದ ಕುರಿತು ಕಲಾನುಭವ, ರಸಾನುಭವದ ಕುರಿತು ಹೇಳುತ್ತದೆ. ಆದರೆ ನಾಗಲಮಡಿಕೆಯವರು ಜನಪದ ಮಹಾಕಾವ್ಯಗಳ ಸೌಂದರ್ಯವನ್ನು ಸಂಘರ್ಷ, ಸಾಮರಸ್ಯದ ಮೂಲಕ ನೋಡುತ್ತಾರೆ. ಅವರೇ ಹೇಳುವ ಹಾಗೆ 'ಸೌಂದರ್ಯ ಎಂದರೆ ಇಲ್ಲಿ ಬರೀ ಸುಂದರ ಅನುಭೂತಿ ಮಾತ್ರವಲ್ಲ; ಸಂಘರ್ಷದಲ್ಲೂ ಸಾಮರಸ್ಯವನ್ನೂ ಅನಾವರಣಗೊಳಿಸುವ ಬಗೆ. ಮತ್ತೊಂದು ದಿನನಿತ್ಯದ ದಂದುಗಗಳಲ್ಲಿ ಬದುಕಿನ ಅರ್ಥವನ್ನು ಶೋಧಿಸುವ ಪರಿ. ಇಲ್ಲಿ ಹಲವು ಕಲಾವಿದರಿದ್ದಾರೆ; ಹಲ ಬಗೆಯ ಲೋಕಗಳಿವೆ. ಜನಪದ ಪಠ್ಯಗಳನ್ನು 'ಕಲಾಕೃತಿ'ಗಳೆಂದು ಕರೆಯಬೇಕೆ ಬೇಡವೇ, ಎಂಬುದು ಮುಖ್ಯ ಪ್ರಶ್ನೆಯಾದರೂ, ಮಾತಿನಿಂದ ಬರಹಕ್ಕಿಳಿದ ಈ

ಪಠ್ಯಗಳು ತಮ್ಮದೇ ಲೋಕಾನುಭವಗಳಿಂದ ಎಂದೋ 'ಕಲಾಕೃತಿ'ಗಳಾಗಿ ಮಾರ್ಪಾಡಾಗಿವೆ. ಅವರ ಮಾತಿನ ಲಯಗಳಲ್ಲಿಯೇ ಒಂದು ಬಗೆಯ ಸೌಂದರ್ಯವಿದೆ' ಎಂದು ಜನಪದರ ದುಃಖವೂ ಮೌಖಿಕ ಕಾವ್ಯದ ಸೌಂದರ್ಯಕ್ಕೆ ಮರ್ಜ್ ಮಾಡುತ್ತಾರೆ.

ಎಲ್ಲಾ ಜ್ಞಾನಶಿಸ್ತುಗಳಿಗೂ ಜನಪದವೇ ತಾಯಿಬೇರು ಎನ್ನುವ ಲೋಕ ಸತ್ಯವನ್ನು ಮರೆತ ವಿದ್ವಾಂಸರು ಸಾಹಿತ್ಯವನ್ನು ವೇದ ಪುರಾಣಗಳಿಂದ ಪ್ರಾರಂಭಿಸಿ ವೈವಿಧ್ಯಮಯವಾದಂಥ ಜನಾಂಗಿಯ ಪುರಾಣ ಮತ್ತು ಲಿಪಿರಹಿತ ಸಾಹಿತ್ಯವನ್ನು ಅಲಕ್ಷಿಸಿರುವುದನ್ನು ಹೇಳುತ್ತ; ಇಲ್ಲಿಯ ಮೌಖಿಕ ಸಾಹಿತ್ಯವು ಕಾವ್ಯ ಮೀಮಾಂಸೆಗೂ, ಕುಲಶಾಸ್ತ್ರದ ಅಧ್ಯಯನಕ್ಕೂ, ಸಾಮಾಜಿಕ, ಆರ್ಥಿಕ, ಮನೋವೈಜ್ಞಾನಿಕದಂಥ ಶಿಸ್ತುಗಳಿಗೂ ಹಾಗೂ ಆದಿಮ ಕಾಲದಿಂದ ಧರ್ಮಕ್ಕಿಂತ ಕುಲ ವೃತ್ತಿಗಳಿಗೆ ಒತ್ತುಕೊಟ್ಟಿರುವ ಇಂಥ ವೈವಿಧ್ಯಮಯ ಶಾಕ್ತ, ಶೈವ ಪರಂಪರೆಗಳು ಅನುಕೂಲಕರವೆನ್ನುವುದು ಈ ಕೃತಿ ಎತ್ತಿ ತೋರಿಸುತ್ತದೆ. ಹಾಲುಮತ ಕಾವ್ಯದಲ್ಲಿ ಬರುವ ಮೂಲಮಾತೃಕೆಯರಾದ ಎಲ್ಲಮ್ಮ, ಪಾರ್ವತಿ, ಸೂರಮ್ಮ, ಕೊಂತೆವ್ವ, ಜುಂಜಪ್ಪ ಮತ್ತು ಮಂಟೇಸ್ವಾಮಿ, ಮಾದಪ್ಪ ಕಾವ್ಯದಲ್ಲಿ ಬರುವ ಬೇವಿನ ಕಟ್ಟೆ ಕುರುಬರ ಕಾಳಮ್ಮ, ಕುಂಚಟಿಗ ಒಕ್ಕಲಿಗ ದೊಡ್ಡಕಜ್ಜಿಯಂಥವರ ಪ್ರಸಂಗಗಳನ್ನು ಗಮನಿಸಿದರೆ ದಕ್ಷಿಣ ಭಾರತದ ಮಾತೃ ಪ್ರಧಾನವ್ಯವಸ್ಥೆಯ ಮುಂದುವರೆದ ಭಾಗವಾಗಿ ಕಂಡುಬರುತ್ತದೆ. ಈ ಮೂರೂ ಕೃತಿಗಳಲ್ಲಿ ನಾಗಲಮಡಿಕೆಯವರು ಶೈವ, ಶಾಕ್ತ, ವೈಷ್ಣವ, ನಮ್ಮ ನೆಲಮೂಲದ ಅವೈದಿಕ ದರ್ಶನಗಳಾಗಿದ್ದು ಇವುಗಳನ್ನು ವೈದಿಕ ದರ್ಶನದಿಂದ ಬಿಡಿಸಿಕೊಳ್ಳುವ ಸೂಕ್ಷ್ಮತೆಯನ್ನು ಸುದೀರ್ಘವಾಗಿ ಚರ್ಚಿಸಿದ್ದಾರೆ.

ಇಂಥ ಸಮೃದ್ಧವಾದಂತಹ ಪರಂಪರೆಗಳನ್ನು ಅವಧೂತರು, ಕಾಲಜ್ಞಾನಿಗಳು, ಸೂಫಿಗಳವರೆಗೂ ಚಾಚಿಕೊಂಡು ಕನ್ನಡ ಸಾಹಿತ್ಯದ ಸಾಂಸ್ಕೃತಿಕ ಚರಿತ್ರೆಯನ್ನು ಡಿ.ಆರ್.ನಾಗರಾಜ ಅವರ 'ಅಲ್ಲಮ ಪ್ರಭು ಮತ್ತು ಶೈವ ಪ್ರತಿಭೆ' ಕೃತಿಯ ಕೆಲವು ಮುಖ್ಯ ಫಾರ್ಮ್ ಬಳಸಿಕೊಂಡರೂ 'ಹಾಡು ಕಲಿಸಿದ ಹರ' ಅಭಿನ್ನವಾಗಿ ನಿರ್ವಚಿಸುತ್ತದೆ. ಮತ್ತು ಇಂಥ ಲಿಪಿರಹಿತ ಮೌಖಿಕ ಪರಂಪರೆಗಳನ್ನು ಆಧುನಿಕ ಸಾಹಿತ್ಯದ ನವೋದಯ, ನವ್ಯ, ದಲಿತ ಬಂಡಾಯದವರೆಗೂ ದಾಟಿಸಿಕೊಂಡು ಹೋಗಿದ್ದಾರೆ. ವೈದಿಕ ಹಿನ್ನೆಲೆಯಿಂದ ಬಂದ ಬೇಂದ್ರೆಯವರು ಜನಪದ ಲೋಕವನ್ನು 'ಏಳು ಕನ್ನಿಕೆಯರು' 'ಜೋಗಿ' ಕವಿತೆಗಳನ್ನು ಉದಾಹರಿಸುತ್ತಾರೆ. ಆದರೆ ಶೂದ್ರ ಹಿನ್ನೆಲೆಯಿಂದ ಬಂದ ಕುವೆಂಪುರವರು 'ವೈಚಾರಿಕ ಆಯಾಮಗಳನ್ನು ಮತ್ತು ನಿಸರ್ಗದ ದರ್ಶನವನ್ನು ಜನಪದ ನುಡಿಗಟ್ಟಿನಲ್ಲಿ ಬರೆಯಲಿಲ್ಲ' ಎಂದು ಹೇಳುತ್ತಾರೆ. ಮುಂದೆ ಎಚ್.ಎಸ್ ಶಿವಪ್ರಕಾಶ್, ಎಸ್.ಜಿ ಸಿದ್ಧರಾಮಯ್ಯ, ಕೆ.ಬಿ ಸಿದ್ಧಯ್ಯನಂಥವರನ್ನು ವಚನ, ಸೂಫಿ, ತತ್ವಪದಗಳಲ್ಲಿರುವ ದರ್ಶನವನ್ನು ಮತ್ತು ಅಲ್ಲಿಯ ನುಡಿಗಟ್ಟುಗಳನ್ನು ಬಳಸಿಕೊಂಡ ಬಗೆಯನ್ನು ಆಲೋಚಿಸುತ್ತಾರೆ. ಮುಂದುವರೆದು ಇವರುಗಳಿಗಿಂತ ಕಂಬಾರರು ಜನಪದ ಶೈವಧಾರೆಗಳನ್ನು ಮತ್ತು ಅಲ್ಲಿಯ ಕಾವ್ಯದ ಮಟ್ಟುಗಳನ್ನು ಎಡೆಬಿಡದೆ ಬಳಸಿಕೊಂಡಿರುವದನ್ನು ಹೇಳುತ್ತಾರೆ. ಇದು

ಇಷ್ಟಕ್ಕೆ ನಿಲ್ಲಿಸದೇ ಹೊಸ ತಲೆಮಾರಿನ ಕಾವ್ಯ ಮತ್ತು ಜನಪದದಲ್ಲಿ ಲಲಿತ ಸಿದ್ಧಬಸವಯ್ಯ, ನಾರಾಯಣ ಸ್ವಾಮಿ ಕೆ.ವೈ, ನಟರಾಜ ಬೂದಾಳು, ವಡ್ಡಗೆರೆ ನಾಗರಾಜಯ್ಯ, ಜಿ.ವಿ ಆನಂದ ಮೂರ್ತಿ, ಅವರನ್ನು ಹೆಸರಿಸುತ್ತಾರೆ. ನಾನು ಓದಿದಂತೆ ಸವಿತಾ ನಾಗಭೂಷಣ ಅವರೂ ಜನಪದ ಮಟ್ಟುಗಳನ್ನು ತಮ್ಮ ಕಾವ್ಯದಲ್ಲಿ ಬಳಸಿಕೊಂಡಿದ್ದಾರೆ. ತೀರಾ ಇತ್ತೀಚಿನ ಕವಿಗಳಾದ ಆರೀಫ್ ರಾಜಾ, ವೀರಣ್ಣ, ಚನ್ನಪ್ಪ ಅಂಗಡಿ, ಹುಲಿಕುಂಟೆ ಮೂರ್ತಿ, ಎಸ್ ಮಂಜು, ಗಂಗಪ್ಪ ತಳವಾರ, ಆನಂದ ಕುಂಚನೂರು, ಬಸವರಾಜ ಹೃತಾಕ್ಷಿ, ಸ್ವಾಮಿ ಪೊನ್ನಾಚಿ, ರಾಜೇಂದ್ರ ಪ್ರಸಾದ್ ಇವರೆಲ್ಲರಿಗೂ ದೇಸಿ ಪರಂಪರೆಗಳ ಮೇಲೆ ಆಸಕ್ತಿ ಇದ್ದು ಒಂದಷ್ಟು ಧ್ಯಾನಸ್ಥ ಸ್ಥಿತಿ ರೂಢಿಸಿಕೊಳ್ಳಬೇಕೆಂದು ಹೇಳುತ್ತಾರೆ. ಆದರೆ ಇಂಥ ಶಕ್ತಿಯನ್ನು ರೂಢಿಸಿಕೊಂಡು ದಾಟಬಲ್ಲ ಶಕ್ತಿ ರಮೇಶ ಆರೋಲಿ ಮತ್ತು ಚಿಮನಹಳ್ಳಿ ರಮೇಶ್ ಬಾಬು ಅವರಿಗಿದೆ ಎಂದು ಉದಾಹರಿಸುತ್ತಾರೆ. ನಾನು ಇತ್ತೀಚೆಗೆ ಗಮನಿಸಿದಂತೆ ದೇವು ಮಾಕೊಂಡ, ಸುಮಿತ್ ಮೇತ್ರಿ, ಭುವನಾ ಹಿರೇಮಠ, ಮಧು ಬಿರಾದಾರ ಅವರ ಕವಿತೆಗಳಲ್ಲಿಯೂ ದೇಸಿ ಪರಂಪರೆಗಳ ನುಡಿಗಟ್ಟುಗಳು ಸಿಗುತ್ತವೆ.

**ಮುಗಿಸುವ ಮುನ್ನ:**

ಕನ್ನಡದ ಕಾಲುದಾರಿ ಪಂಥಗಳ ಕುರಿತು ಸಾಂಸ್ಕೃತಿಕವಾಗಿ ಚಿಂತಿಸುತ್ತಿರುವ ರಹಮತ್ ತರೀಕೆರೆ, ನಟರಾಜ ಬೂದಾಳು, ಜಿ.ವಿ ಆನಂದಮೂರ್ತಿ, ಮೀನಾಕ್ಷಿ ಬಾಳಿ, ಲಕ್ಷ್ಮೀಪತಿ ಕೋಲಾರ, ಎಚ್.ಎಸ್ ಶಿವಪ್ರಕಾಶ್, ಪದ್ಮಾಲಯ ನಾಗರಾಜಯ್ಯ, ಸುರೇಶ್ ನಾಗಲಮಡಿಕೆಯವರನ್ನು ಒಳಗೊಂಡು ಮುಂತಾದವರನ್ನು ಒಂದಷ್ಟು ಓದಿಕೊಳ್ಳುತ್ತಿರುವೆ. ಇಲ್ಲಿಯ ಯಾರಿಂದ ಕೂಡ ಅವಧೂತರು, ನಾಥರು, ಸಿದ್ಧರು, ಆರೂಢರು, ಶರಣರು, ಅಚಲರು, ಅಮನಸ್ಕರು ಇವರ ನಡುವಿರುವ ಮೂಲಭೂತ ವ್ಯತ್ಯಾಸಗಳು ಯಾವುವು? ಎನ್ನುವುದು ತೃಪ್ತಿಕರವಾದ ಉತ್ತರ ನನಗೆ ದೊರಕಿಲ್ಲವೆಂದೇ ಹೇಳಬೇಕಾಗುತ್ತದೆ. ಈ ಪಂಥಗಳು ಕೂಡಿ ಬಾಳುತ್ತಿರುವುದಂತೂ ಗೊತ್ತೇ ಇದೆ. ಅದರೆ ಅವುಗಳಲ್ಲಿರುವ ವ್ಯತ್ಯಾಸಗಳನ್ನು ಗುರುತಿಸಿದರೆ, ದರ್ಶನಗಳನ್ನು ಮತ್ತಷ್ಟು ಹಿಗ್ಗಿಸಿ ಚಿಂತಿಸುವ ಸಾಧ್ಯತೆ ಇದೆ.